## ಕನಸುಕಂಗಳ ಕೊಡಗಿನ ಬೆಡಗಿ

# ವರ್ಷ ಬೊಳ್ಳಮ್ಮ

ತೆಲುಗು, ತಮಿಳು, ಮಲೆಯಾಳಂನ ಹಲವು ಸಿನಿಮಾಗಳಲ್ಲಿ ನಟಿಸಿರುವ ಕೊಡಗಿನ ಬೆಡಗಿ ವರ್ಷ ಬೊಳ್ಳಮ್ಮ 'ಮಹಾನ್' ಸಿನಿಮಾ ಮೂಲಕ ಕನ್ನಡಕ್ಕೆ ಪದಾರ್ಪಣೆ ಮಾಡುತ್ತಿದ್ದಾರೆ. ಅತ್ಯುತ್ತಮ ಪಾತ್ರವೊಂದರ ಮೂಲಕ ಕನ್ನಡ ಸಿನಿಮಾರಂಗಕ್ಕೆ ಪರಿಚಯಿಸಿಕೊಳ್ಳುತ್ತಿರುವ ಕುರಿತು 'ಸುಧಾ'ದೊಂದಿಗೆ ಮಾತನಾಡಿದ್ದಾರೆ.

■ ಸುಮಲತಾ ಎನ್.



◆ **ಕನ್ನಡದವರೇ ಆದರೂ ಕನ್ನಡ ಸಿನಿಮಾರಂಗಕ್ಕೆ ಬರಲು ಇಷ್ಟು ಸಮಯ ಹಿಡಿಯಿತಲ್ಲ?**

ಕನ್ನಡ ನನ್ನ ಮಾತೃಭಾಷೆಯಾಗಿದ್ದರೂ ನನ್ನದೇ ಭಾಷೆಯಲ್ಲಿ ಸಿನಿಮಾ ಮಾಡಲು ಸಾಧ್ಯವಾಗಿರಲಿಲ್ಲ. ಸುಮಾರು ಹತ್ತು ವರ್ಷಗಳಿಂದಲೂ ತಮಿಳು, ತೆಲುಗು, ಮಲೆಯಾಳಂ ಸಿನಿಮಾಗಳಲ್ಲಿ ತೊಡಗಿಕೊಂಡಿದ್ದೇನೆ. ಆದರೆ ನನ್ನದೇ ಭಾಷೆಯಾದ ಕನ್ನಡದಲ್ಲಿ ಸಿನಿಮಾ ಮಾಡಿಲ್ಲ ಎಂಬ ಕೊರಗು ಇದ್ದೇ ಇತ್ತು. ಕನ್ನಡ ಸಿನಿಮಾರಂಗದಲ್ಲಿ ಹೊಸ ಹೊಸ ಪ್ರಯೋಗಗಳಾಗುತ್ತಿದ್ದರೂ, ಹಲವು ಜಾನರ್‌ಗಳಲ್ಲಿ ಸಿನಿಮಾಗಳಾಗುತ್ತಿದ್ದರೂ ಉತ್ತಮ ಅವಕಾಶಗಳು ಸಿಕ್ಕಿರಲಿಲ್ಲ. ಸ್ವಲ್ಪ ಅಂತರ ಕೂಡ ಆಯಿತು. ಕನ್ನಡಕ್ಕೆ ಬಂದರೆ ಉತ್ತಮ ಕಥೆಯೊಂದಿಗೇ ಬರಬೇಕು ಎಂಬ ಆಲೋಚನೆಯಿತ್ತು. ಈಗ ಒಂದೊಳ್ಳೆಯ ಸಿನಿಮಾ ಹಾಗೂ ಅತ್ಯುತ್ತಮ ಪಾತ್ರವೊಂದರ ಮೂಲಕ ಬರುತ್ತಿರುವ ಖುಷಿಯಿದೆ.

◆ **ಸಿನಿಮಾರಂಗಕ್ಕೆ ಬಂದ ಹಿನ್ನೆಲೆ...**

ನಾನು ಹುಟ್ಟಿದ್ದು ಕೊಡಗಿನಲ್ಲಿ. ಶಾಲಾ ಕಾಲೇಜು ಮುಗಿಸಿದ್ದು ಬೆಂಗಳೂರಿನಲ್ಲಿ. ನನ್ನ ಕುಟುಂಬದಲ್ಲಾಗಲೀ ಸ್ನೇಹಿತರ ವಲಯದಲ್ಲಾಗಲೀ ಸಿನಿಮಾರಂಗಕ್ಕೆ ಸಂಬಂಧಿಸಿದವರು ಯಾರೂ ಇರಲಿಲ್ಲ. ಚಿಕ್ಕವಯಸ್ಸಿನಲ್ಲಿ ಟೀವಿ ನೋಡುತ್ತಿದ್ದಾಗೆಲ್ಲ ಆ ಟೀವಿಯೊಳಗೆ ನಾನೂ ಬರಬೇಕು ಎಂಬ ಆಸೆಯೊಂದು ಹುಟ್ಟಿಕೊಂಡಿತ್ತು. ಆ ಆಸೆಯೇ ನನ್ನನ್ನು ನಟನೆಗೆ ಕರೆತಂದಿರಬಹುದು. ಓದಿನ ನಂತರ ಆಡಿಷನ್‌ಗಳನ್ನು ಕೊಡಲು ಆರಂಭಿಸಿದ್ದೆ. ಮೊದಲು ತಮಿಳಿನಲ್ಲಿ ಸಿನಿಮಾ ಅವಕಾಶ ದೊರೆಯಿತು. ನಂತರ ಮಲೆಯಾಳಂ, ತೆಲುಗು ಭಾಷೆಯಲ್ಲಿ ಹಲವು ಸಿನಿಮಾಗಳಲ್ಲಿ ಅಭಿನಯಿಸಿದೆ.

◆ **ಕನ್ನಡದಲ್ಲಿ ಯಾವ ರೀತಿ ಪಾತ್ರಗಳನ್ನು ಮಾಡುವ ಆಸೆಯಿದೆ?**

ಪಾತ್ರಗಳ ವಿಷಯದಲ್ಲಿ ನನಗೆ ತುಂಬಾ ದುರಾಸೆ. ಎಲ್ಲ ರೀತಿಯ ಪಾತ್ರಗಳನ್ನೂ ಪ್ರಯೋಗಿಸಬೇಕು ಎನ್ನಿಸುವುದು ಕಲಾವಿದರಿಗೆ ಸಹಜವೂ ಹೌದು. ನೆಗೆಟಿವ್ ಪಾತ್ರಗಳನ್ನು, ಅಂದರೆ, ಸೈಕೊ ಕಿಲ್ಲರ್‌ನಂಥ ಪಾತ್ರಗಳನ್ನು ಪ್ರಯೋಗಿಸಬೇಕು ಎಂಬ ಆಸೆಯಿದೆ. ಜೊತೆಗೆ ಕನ್ನಡದಲ್ಲಿ ಹಲವು ನಟರು, ನಿರ್ದೇಶಕರ ಜೊತೆ ಕೆಲಸ ಮಾಡಬೇಕೆಂಬ ಉತ್ಸಾಹವಿದೆ. ಕರ್ನಾಟಕವೇ ನನ್ನ ಮನೆಯಾದ್ದರಿಂದ ಇಲ್ಲಿ ಸಿನಿಮಾಗಳನ್ನು ಮಾಡಿ ಗೆಲ್ಲಬೇಕೆಂಬ ಹಂಬಲವಿದೆ.

◆ **ಸಿನಿಮಾ ಕಥೆಗಳ ಕುರಿತ ನಿಮ್ಮ ನಿರೀಕ್ಷೆಗಳು?**

ಮೊದಲು ಕಥೆ ಹೇಗಿದೆ ನೋಡುತ್ತೇನೆ. ಅದರಲ್ಲಿನ ಭಿನ್ನತೆಯ ಅಂಶಗಳನ್ನು ಗಮನಿಸುತ್ತೇನೆ. ನಂತರ ನನ್ನ ಪಾತ್ರದ ಬಗ್ಗೆ ಗಮನಹರಿಸುತ್ತೇನೆ. ಈ ಸಿನಿಮಾದಲ್ಲಿ ನನ್ನ ಪಾತ್ರವನ್ನು ಹೊರತುಪಡಿಸಿ ನೋಡಿದರೆ ಹೇಗಿರುತ್ತದೆ ಎಂದು ಕಲ್ಪನೆ ಮಾಡಿಕೊಂಡು ನೋಡುತ್ತೇನೆ. ಆ ನಂತರವೇ ಸಿನಿಮಾ ಮಾಡಬೇಕಾ ಬೇಡವಾ ಎಂಬುದನ್ನು ನಿರ್ಧರಿಸುತ್ತೇನೆ. ಸಿನಿಮಾಗಳ ಸಂಖ್ಯೆಗಿಂತ ಗುಣಮಟ್ಟವೇ ನನ್ನ ಆದ್ಯತೆ.

◆ **ನಿಮ್ಮ ಮುಂದಿನ ನಡೆ...**

ತೆಲುಗಿನಲ್ಲಿ 'ಕಾನ್‌ಸ್ಟೆಬಲ್ ಕನಕಂ' ಎರಡನೇ ಸೀಸನ್ ಬರುತ್ತಿದೆ. ಅದರಲ್ಲಿ ನಟಿಸುತ್ತಿದ್ದೇನೆ. ಇನ್ನೂ ಎರಡು ತೆಲುಗು ಸಿನಿಮಾಗಳಲ್ಲಿ ತೊಡಗಿಕೊಂಡಿದ್ದೇನೆ. ■